ಡಿಸ್ಟ್ರಿಕ್ಟ್ ಭಂಡ.

ನಂ. 367. ತಾರೀಖು 16ನೇ ಜನವರೀ 1877.

ತುಮಕೂರು ಡಿಸ್ಟ್ರಿಕ್ಟ್ ನುದ್ದಗಿರೀ ತಾಲ್ಲೂಕು ಹಂಗಾಮಿ ಮೇಸ್ತ್ರಿ ಪಾರ್ಥಸಾರಥಿನಾಯಕರಿಗೆ 1876ನೇ ಇಸವೀ ಆಗಸ್ಟ್ 2ನೇ ತಾರೀಖು ಲಗಾಯತು 16ನೇ ತಾರೀಖು ವರಿಗೆ 15 ದಿನಗಳ ವಿಲೀಜ್ ರಜಾ ಕೊಡಲ್ಪಟ್ಟಿತು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆ.

ಜನರಲ್.

ಇಸ್ತಿಹಾರ್ನಾಮೆ.

ನಂ. 17. ತಾರೀಖು 15ನೇ ಜನವರೀ 1877.

ಆಫೀಸ್ ಯೇಟಿಂಗ್ ಚೀಫ್‌ಕಮ್ಮಿಷನರವರು ಅಪ್ಪಣೇ ಕೊಡಿಸುವದೇನಂದರೆ,—1876ನೇ ಡಿಸಂಬರ್ 19ನೇ ಮುಕ್ತುಂ 3297ನೇ ನಂಬರ್ ಇಂಡ್ಯಗನರ್ಮೆಂಟ್ ಫಿನಾನ್ಸಿಯಲ್ ರೆಜೋಲ್ಯೂಷನ್ ಪರತ್ತುಗಳನುಸರಿಸಿ ಕೊಡಗಿನಲ್ಲಿ ಮಾಹೇಯಾನಾ 16 ರೂಪಾಯಿಗಳ ತಲಬಿಗೆ ಜಾಸ್ತೀ ಇಲ್ಲದೆ ಇರುವ ಅಥವಾ ಕುದುರೇ ಇಟ್ಟುಕೊಳ್ಳಲೇಕಾಗಿ ಇರುವವರ ವಿಷಯದಲ್ಲಿ ಮಾಹೇಯಾನಾ 25 ರೂಪಾಯಿಗಳಿಗೆ ಜಾಸ್ತೀ ಇಲ್ಲದೆ ಇರುವ ಕೊಡಗಿನ ಕಾಯಂ ಸಿವಿಲ್ ಲವಾಜಮೆಗೆ ಸೇರಿದ ದರೋಬಸ್ತು ಗವರ್ಮೆಂಟ್ ನೌಕರರಿಗೂ 1877ನೇ ಜನವರೀ ಗುರ್ರೇ ಲಗಾಯತ್ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಮಾಹೇಯಾನಾ 1—8—0 ರೂಪಾಯಿಯ ಜಾಸ್ತೀ ಅಲೌನ್ಸ್ ಕೊಡಲ್ಪಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.